ಮೊಟಕುಗೊಳಿಸಲು ಇಷ್ಟಪಡಲಿಲ್ಲ. ಸಮಾನಮನಸ್ಕರ ಜೊತೆ ಸೇರಿ ಬಂಡವಾಳ ಹೂಡಿ, ತಮ್ಮ ತಲೆಯಲ್ಲಿ ಇದ್ದ, ಚಿತ್ರಕಥಾ ರೂಪಕ್ಕೆ ಇಳಿಸಿದ್ದ 'ದ್ವೀಪ'ವನ್ನು ಅವರು ಮರುಸೃಷ್ಟಿಸಿದರು.

ಒವ್ಯಾಷ್‌ವಿಲಿ ಇಂಥದ್ದೊಂದು ಚಿತ್ರಕಥೆಯನ್ನು ಸಿದ್ಧಪಡಿಸಲು ಆರಂಭಿಸಿದ್ದು 2008ರಲ್ಲಿ. ಒಂದು ವರ್ಷ ಕಳೆಯುವಷ್ಟರಲ್ಲಿ ಅವರ ಸಹ ಚಿತ್ರಕಥಾ ಲೇಖಕ (ನುಗ್ಜರ್ ಶತೈದ್ಜೆ) ಮೃತಪಟ್ಟರು. ಚಿತ್ರಕಥೆಯ ಮೊದಲ ಕರಡು ಪ್ರತಿಯಲ್ಲಿ ಇನ್ನಷ್ಟು ಸಂಭಾಷಣೆಗಳಿದ್ದುವು. 'ಸ್ಕ್ರಿಪ್ಟ್ ಅನ್ನು ತಿದ್ದುವ ಪ್ರಕ್ರಿಯೆಗೆ ಇಳಿದಾಗ ಆ ಪಾತ್ರಗಳಿಗೆ ಸಂಭಾಷಣೆಯ ಹಂಗೇ ಇಲ್ಲ ಎಂದು ಅನ್ನಿಸಿತು. ಈ ಸಿನಿಮಾದಲ್ಲಿ ಸಂಭಾಷಣೆ ಬಳಸಿರುವುದು ಅಗತ್ಯ ಮಾಹಿತಿ ದಾಟಿಸುವ ಅನಿವಾರ್ಯತೆ ಇರುವೆಡೆ ಮಾತ್ರ' ಎಂದಿದ್ದಾರೆ ಒವ್ಯಾಷ್‌ವಿಲಿ.

ಇದು ರಿಯಲಿಸ್ಟಿಕ್ ಸಿನಿಮಾ ಎನ್ನಲು ಇನ್ನೊಂದು ಕಾರಣವಿದೆ. ಒವ್ಯಾಷ್‌ವಿಲಿ ಬಾಲ್ಯದ ರಜಾ ದಿನಗಳನ್ನು ಕಳೆಯುತ್ತಿದ್ದುದೇ ಇಂಗುರಿ ನದಿ ಹತ್ತಿರದ ಹಳ್ಳಿಯಲ್ಲಿ. ಅಲ್ಲಿನ ರಮಣೀಯ ಪ್ರಕೃತಿ ಸೌಂದರ್ಯ ಅವರನ್ನು ಅಂದಿನಿಂದಲೂ ಕಾಡುತ್ತಲೇ ಇದೆ. 1990ರ ದಶಕದಿಂದ ಆ ಪ್ರದೇಶದಲ್ಲಿನ ಯುದ್ಧದ ಸನ್ನಿವೇಶವನ್ನು ಕೂಡ ಅವರು ಕಂಡರಿತವರೇ. ಇವೆಲ್ಲ ಕಟ್ಟಿಕೊಟ್ಟ ಅನುಭವದ್ರವ್ಯ ಇಂಥ ಸಿನಿಮಾ ಮಾಡಲಿಕ್ಕೆ ಒವ್ಯಾಷ್‌ವಿಲಿ ಅವರನ್ನು ಪ್ರೇರೇಪಿಸಿರಲಿಕ್ಕೂ ಸಾಕು. ಯುದ್ಧ ಅವರನ್ನು ಕಾಡುವ ವಸ್ತು ಎನ್ನುವುದಕ್ಕೆ ಅವರ ಮೊದಲ ಸಿನಿಮಾ 'ದಿ ಅದರ್ ಬ್ಯಾಂಕ್' (2009) ಕೂಡ ಪುಷ್ಟಿ ನೀಡುತ್ತದೆ. ಅಲ್ಲಿಯೂ ಯುದ್ಧದ ಪರಿಣಾಮಗಳನ್ನು ಅವರು ಸೂಚ್ಯವಾಗಿ ಹೇಳುತ್ತಾರೆಯೇ ವಿನಾ ರಕ್ತದೋಕುಳಿಯನ್ನು ತೋರುವ ಮಾರ್ಗವನ್ನು ಅನುಸರಿಸಿಲ್ಲ. ಪ್ರಕೃತಿಯನ್ನೇ ಮುಖ್ಯ ಪಾತ್ರವಾಗಿಸುವುದು ಅವರ ಗಮನಾರ್ಹ ತಂತ್ರ.



ದ್ವೀಪದ ಸೆಟ್ ಹಾಕುವುದೆಂದರೆ ತಮಾಷೆಯೇ? ಅಲ್ಲಿ ತೆಗೆಯುವ ಬೆಳೆಯನ್ನು ನಿರ್ದೇಶಕ ನಾಲ್ಕು ಹಂತಗಳಲ್ಲಿ ತೋರಿರುವುದೇ ಅಲ್ಲದೆ ಸಣ್ಣ ಸಣ್ಣ ಸಂಗತಿಗಳನ್ನು ಒಂದಿನಿತೂ ನಿರ್ಲಕ್ಷಿಸದೆ, ಕ್ಯಾಮೆರಾ ತಂತ್ರಗಾರಿಕೆಯ ಅವಲಂಬನೆಯನ್ನೂ ತಗ್ಗಿಸಿಕೊಂಡಿದ್ದಾರೆ. 'ಕಟ್ಟುವ ಕ್ರಿಯೆ'ಯನ್ನೇ ಅವರು ಸಿನಿಮಾ ಕಟ್ಟುವ ಪ್ರಕ್ರಿಯೆಯ ತಂತ್ರವನ್ನಾಗಿಸಿರುವುದು ಢಾಳಾಗಿ ಕಾಣುತ್ತದೆ.

ಬೊಂಬೆಯೊಂದನ್ನು ತನ್ನ ಜೊತೆ ತರುವ ಮೊಮ್ಮಗಳು ಕೆಲಸಕ್ಕೆ ನಿಂತೊಡನೆ ಅದನ್ನು ಪಕ್ಕಕ್ಕೆ ಇಡುವ ಪರಿಯಲ್ಲಿಯೇ ಪಾತ್ರ ಪ್ರಬುದ್ಧತೆ ಇದೆ. ಅಜ್ಜನ ವೃತ್ತಿಶ್ರದ್ಧೆ, ಪ್ರಕೃತಿಯ ಗತಿ ಅರಿಯುವ ಯತ್ನ, ತುತ್ತಿನಚೀಲ ತುಂಬಿಸಿಕೊಳ್ಳಲು ನಾವು ಕಂಡೇ ಇರದಂಥ ಕೃಷಿ ಕ್ರಮ ಅನುಸರಿಸುವ ವೈಖರಿ, ಕೊನೆಗೆ ಅಳೆಯಲು ಹೊರಟ ಪ್ರಕೃತಿಯೇ ಮುನಿಸಿಕೊಂಡಾಗ ಸಿಕ್ಕಿದಷ್ಟು ಬೆಳೆಯನ್ನೇ ದಕ್ಕಿಸಿಕೊಳ್ಳುವ ಅವನ ಮುಖಭಾವವನ್ನೇ ಆಗ ಗೌಣ ಮಾಡಿಬಿಡುತ್ತಾರೆ. ದುರಂತ ಅಂತ್ಯವನ್ನು ಅವರು ಮೆಲೋಡ್ರಾಮಾ ಮಾಡಿ ಮುಗಿಸುವುದಿಲ್ಲ. ಮಳೆ ಸುರಿದು, ದ್ವೀಪವನ್ನು ಮುಳುಗಿಸಿದ ಮೇಲೆ ಅವರು ಎಲ್ಲವೂ ಮುಳುಗಿಹೋಯಿತು ಎಂದು ಸಂದೇಶದ ಧಾಟಿಗೆ ಇಳಿಯುವುದಿಲ್ಲ.